ಪಂಚಾಯಿತಿ ಚುನಾವಣೆ

# ಗ್ರಾಮ ರಾಜ್ಯದಿಂದ ರಾಮ ರಾಜ್ಯಕ್ಕೆ ಬುನಾದಿ



ಕರ್ನಾಟಕಕ್ಕೆ ಪಂಚಾಯತ್ ರಾಜ್ ವ್ಯವಸ್ಥೆ ಹೊಸದಲ್ಲ. ಆದರೆ 1987ರ ನಂತರ ಈ ವ್ಯವಸ್ಥೆಯಲ್ಲಿ ಮೊತ್ತ ಮೊದಲ ಬಾರಿಗೆ ಹಿಂದುಳಿದ ವರ್ಗದವರಿಗೂ ಮೀಸಲಾತಿ ವ್ಯವಸ್ಥೆ  ಜಾರಿಗೆ ಬಂದಿತು. ಅದರಂತೆ ಎಲ್ಲ ಜಾತಿ ಮತಗಳ ಜನರಿಗೆ ಸದಸ್ಯತ್ವ ಮೀಸಲಾತಿ ನೀಡಲಾಯಿತು. ಆದರೆ ಅಧಿಕಾರ ಸ್ಥಾನಗಳಿಗೆ ಮೀಸಲಾತಿ ನೀತಿ ಅನ್ವಯವಾಗಲಿಲ್ಲ. ಇದರಿಂದಾಗಿ ಅಧಿಕಾರ ಸ್ಥಾನಗಳೆಲ್ಲ ಬಲಿಷ್ಠ ವರ್ಗದ ಪಾಲಾದವು.

ಕರ್ನಾಟಕದ ಈ ಪ್ರಯೋಗದಿಂದ ಪ್ರಭಾವಿತರಾದ ಅಂದಿನ ಪ್ರಧಾನಿ ರಾಜೀವ್ ಗಾಂಧಿ ಅವರು ಸಂವಿಧಾನಕ್ಕೆ ತಿದ್ದುಪಡಿ ತರುವ ಮೂಲಕ, ಸಾಮಾಜಿಕ ನ್ಯಾಯದೊಂದಿಗೆ ಅಧಿಕಾರ ವಿಕೇಂದ್ರೀಕರಣಕ್ಕೊಂದು ಶಾಶ್ವತ ವ್ಯವಸ್ಥೆ ರೂಪಿಸುವ ಕನಸು ಕಂಡರು. ಆದರೆ ರಾಜ್ಯಸಭೆಯಲ್ಲಿ ಈ ಸಂವಿಧಾನ ತಿದ್ದುಪಡಿಯನ್ನು ಎಲ್ಲ ವಿರೋಧ ಪಕ್ಷಗಳೂ ಒಂದಾಗಿ ಒಂದೇ ಮತದಿಂದ ಸೋಲಿಸಿದವು. ಮುಂದೆ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ಸೇತರ ಪಕ್ಷಗಳು ಪಂಚಾಯತ್ ರಾಜ್ ವ್ಯವಸ್ಥೆ ಸಬಲೀಕರಣಕ್ಕೆ ಗಮನಹರಿಸಲಿಲ್ಲ. ನಂತರ ಪ್ರಧಾನಿಯಾದ ಪಿ.ವಿ.ನರಸಿಂಹರಾವ್ ಅವರು ರಾಜೀವ್ ಗಾಂಧಿಯವರ ಕನಸು ನನಸಾಗುವಂತೆ ಮಾಡಿದರು.

73ನೇ ಸಂವಿಧಾನ ತಿದ್ದುಪಡಿಯು ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿ ಎಂಬ ಮೂರು ಹಂತದ ವ್ಯವಸ್ಥೆಯನ್ನು ಜಾರಿಗೊಳಿಸಿತು. ಪರಿಶಿಷ್ಟರ ಮೀಸಲಾತಿ ಜೊತೆಗೆ ಮಹಿಳಾ ಮೀಸಲಾತಿಯನ್ನೂ ಜಾರಿಗೆ ತಂದಿತು. ಹಿಂದುಳಿದ ವರ್ಗಗಳ ಮೀಸಲಾತಿ ನಿರ್ಧರಿಸುವ ಅಧಿಕಾರವನ್ನು ರಾಜ್ಯಗಳಿಗೆ ನೀಡಿತು.

| ಗ್ರಾಮ ಪಂಚಾಯಿತಿಗಳು ಈಗ | |
|---|---|
| ರಾಜ್ಯದಲ್ಲಿರುವುದು | **6,073** |
| ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವುದು | **439** |
| ಚುನಾವಣೆ ನಡೆಯಲಿರುವುದು | **5,844** |
| ಚುನಾವಣೆ ನಡೆಯಲಿರುವ ಸ್ಥಾನಗಳು | **99,981** |
| ಚುನಾವಣೆ ನಡೆಯದ ಸ್ಥಾನಗಳು | **5,523** |

(ಆಗಸ್ಟ್ ನಂತರ ಅವಧಿ ಮುಗಿಯುವ, ಮೇಲ್ದರ್ಜೆಗೆ ಏರಿಸಿರುವ, ಹೈಕೋರ್ಟ್ ತಡೆಯಾಜ್ಞೆ ಕಾರಣಗಳಿಂದಾಗಿ **229** ಗ್ರಾ.ಪಂ.ಗಳಲ್ಲಿ ಚುನಾವಣೆ ನಡೆಯುತ್ತಿಲ್ಲ)

ಈ ತಿದ್ದುಪಡಿಯ ಆಶಯಗಳನ್ನು ಈಡೇರಿಸಲು ರಾಜ್ಯದಲ್ಲಿ 1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮವನ್ನು ಜಾರಿಗೆ ತರಲಾಯಿತು. ಪಂಚಾಯತ್ ವ್ಯವಸ್ಥೆಯಲ್ಲಿ ಎಲ್ಲ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೆ ಹಿಂದುಳಿದ ವರ್ಗಗಳಿಗೂ ಸಹಿತ ಮೀಸಲಾತಿ ಜಾರಿಗೊಳಿಸಿದ ಕರ್ನಾಟಕ ಸರ್ಕಾರ, ರಾಜ್ಯದಲ್ಲಿ ರಕ್ತರಹಿತ ಮೌನ ಸಾಮಾಜಿಕ ಕ್ರಾಂತಿಯನ್ನು ಸಾಧಿಸಿತು. ಇದಕ್ಕೆ ಕಾರಣರಾದವರು ಅಂದಿನ ಮುಖ್ಯಮಂತ್ರಿ ವೀರಪ್ಪ ಮೊಯಿಲಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರಾಗಿದ್ದ ಎಂ.ವೈ.ಘೋರ್ಪಡೆ.

ಸಂವಿಧಾನದ 73ನೇ ತಿದ್ದುಪಡಿಯು 1993ರ ಏಪ್ರಿಲ್ 24ರಿಂದ ಜಾರಿಗೆ ಬಂದರೆ, ಈ ತಿದ್ದುಪಡಿಯ ಆಶಯಗಳನ್ನು ಈಡೇರಿಸುವ ರಾಜ್ಯದ ಕಾಯ್ದೆ ಅದೇ ವರ್ಷದ ಮೇ 10ರಂದು ಜಾರಿಯಾಯಿತು. ಅಂದರೆ ಕೇಂದ್ರ ಈ ವಿಷಯದಲ್ಲಿ ರಾಜ್ಯಗಳ ಅನುಮೋದನೆ ಪಡೆಯುವ ಕಾಲದಲ್ಲಿಯೇ ನಮ್ಮಲ್ಲಿ ಕಾಯ್ದೆ ರಚಿತವಾಗಿತ್ತು.

ಇಂತಹ ರಾಜಕೀಯ ಅಧಿಕಾರ ವಿಕೇಂದ್ರೀಕರಣದಿಂದಾಗಿ ಮೀಸಲಾತಿ ಅಸ್ತ್ರ ಬಳಸಿ 'ಜನರ ಕೈಗೆ ಜನರ ಅಧಿಕಾರ' ಎಂಬುದನ್ನು ನಿಜವಾದ ಅರ್ಥದಲ್ಲಿ ಸಾಧಿಸಲು, ಅಧಿಕಾರ ಸ್ಥಾನದ ಕನಸನ್ನೂ ಕಾಣದಿದ್ದವರು ಅಧಿಕಾರದ ಗದ್ದುಗೆಯಲ್ಲಿ ಆಸೀನರಾಗುವಂತೆ ಮಾಡಲು ಸಾಧ್ಯವಾಯಿತು.

1987ರಿಂದ ಕಾವೇರಿ, ಕೃಷ್ಣೆಯಲ್ಲಿ ಸಾಕಷ್ಟು ನೀರು ಹರಿದಿದೆ. ಪಂಚಾಯತ್ ವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆಗಳು ಆಗಿವೆ. 1987ರ ಕಾಯ್ದೆಯಲ್ಲಿ ಪಂಚಾಯತ್ ವ್ಯವಸ್ಥೆಯಲ್ಲಿ ಅಧಿಕಾರ ಸ್ಥಾನ ಬಲಿಷ್ಠರ ಪಾಲಾಗಿದ್ದರೆ, ಈಗ ಅದು ದುರ್ಬಲ ವರ್ಗದವರಿಗೂ ಸಿಕ್ಕಿದೆ. ಅಂದು ಗ್ರಾಮ ಸಭೆ ಕೇವಲ ಸಲಹೆ ನೀಡುವ ವೇದಿಕೆಯಾಗಿದ್ದರೆ, ಇಂದು ಅದು ಒಟ್ಟು ಪ್ರಭುತ್ವ ವ್ಯವಸ್ಥೆಯ ಭದ್ರ ಬುನಾದಿಯಾಗಿದೆ. ಸರ್ಕಾರದ ಎಲ್ಲ ಯೋಜನೆಗಳ ಫಲಾನುಭವಿಗಳ ಆಯ್ಕೆಯನ್ನು ಗ್ರಾಮ ಸಭೆ ಮಾಡುತ್ತದೆ. ಈ ಆಯ್ಕೆಯನ್ನು ಬದಲಿಸುವ ಅಧಿಕಾರ ಯಾರಿಗೂ ಇಲ್ಲ. ಗ್ರಾಮ ಸಭೆ ತಯಾರಿಸುವ ಗ್ರಾಮದ ಯೋಜನೆಗಳನ್ನು ನಗರ ಪ್ರದೇಶಗಳ ಯೋಜನೆಗಳ ಜೊತೆಗೆ ಕ್ರೋಡೀಕರಿಸಿ ಸಮಗ್ರ ಜಿಲ್ಲಾ ಯೋಜನೆ ರೂಪಿಸುವ ಜವಾಬ್ದಾರಿ ಜಿಲ್ಲಾ ಯೋಜನಾ ಸಮಿತಿಗೆ ಇದೆ. ಆದರೆ ಅದನ್ನು ಸಾಧಿಸದೇ ಇರುವುದು ವಿಷಾದನೀಯ.

ಗ್ರಾಮ ಸ್ವರಾಜ್ಯ ಸ್ಥಾಪನೆ ಮೂಲಕ ಮಹಾತ್ಮ ಗಾಂಧಿಯವರ ಕನಸಿನ ರಾಮರಾಜ್ಯ ಸ್ಥಾಪನೆ ಹಾಗೂ ಸಂವಿಧಾನದ 73ನೇ ತಿದ್ದುಪಡಿಯ ಆಶಯ ಈಡೇರಿಸುವ ರಾಜ್ಯದ ಕಾನೂನು ತನ್ನ ಉದ್ದೇಶ ಸಾಧನೆಯತ್ತ ದಾಪುಗಾಲು ಇಡಲು ಕೆಲವು ತಿದ್ದುಪಡಿಗಳ ಅಗತ್ಯ ಇತ್ತು. ಅದಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅನುಭವಿ ರಾಜಕಾರಣಿ ರಮೇಶ್ ಕುಮಾರ್ ಅವರ ನೇತೃತ್ವದಲ್ಲಿ ರಚಿಸಿದ್ದ ಸಮಿತಿ ಈಗಾಗಲೇ ವರದಿ ನೀಡಿದೆ.

ಈ ಮಧ್ಯೆ ಪಂಚಾಯಿತಿಗಳಿಗೆ ಚುನಾವಣೆ ಸಮೀಪಿಸಿದ್ದರಿಂದ, ಅದಕ್ಕೆ ಸಂಬಂಧಿಸಿದ ತಿದ್ದುಪಡಿಗಳನ್ನು ಮಾತ್ರ ಶಾಸಕಾಂಗ ಅನುಮೋದಿಸಿದೆ. ಮುಖ್ಯಮಂತ್ರಿ ತಮ್ಮ ಬಜೆಟ್ ಭಾಷಣದಲ್ಲಿ, ಮುಂದಿನ ವರ್ಷದಿಂದ ಗ್ರಾಮ ಸಭೆಗಳ ನಿರ್ಣಯಗಳನ್ನು ಆಧರಿಸಿದ ಬೇಡಿಕೆ/ ಅನಿಸಿಕೆ ಒಳಗೊಂಡ ರಾಜ್ಯ ಯೋಜನೆ ರೂಪಿಸುವುದಾಗಿ ಹೇಳಿದ್ದಾರೆ. ಈಗಾಗಲೇ ಗ್ರಾಮೀಣಾಭಿವೃದ್ಧಿ ಸಚಿವ ಎಚ್.ಕೆ.ಪಾಟೀಲ ಅವರು ತಮ್ಮ ಅಧ್ಯಕ್ಷತೆಯಲ್ಲಿ ಅನುಭವಿಗಳನ್ನು ಒಳಗೊಂಡ ಕ್ರಿಯಾ ಪಡೆಯೊಂದನ್ನು ರಚಿಸಿದ್ದಾರೆ. ಇದು ಅನುಷ್ಠಾನಗೊಳ್ಳಬೇಕು ಮತ್ತು ಜನರ ಅನುಭಕ್ಕೆ ಬರಬೇಕು.

ಈಗಿನ ಪಂಚಾಯಿತಿ ಸದಸ್ಯರು ನಿಜಕ್ಕೂ ಸುದೈವಿಗಳು. ಈಗ ಪಂಚಾಯಿತಿಗಳಿಗೆ ಹೆಚ್ಚು ಅಧಿಕಾರ ಹಾಗೂ ಹಣಕಾಸು ಸೌಲಭ್ಯ ಲಭ್ಯವಿದೆ. ಇದನ್ನು

ಬಳಸಿಕೊಂಡು ಸದಸ್ಯರು 5 ವರ್ಷದ ಅಧಿಕಾರಾವಧಿಯಲ್ಲಿ ತಾವು ಬಯಸಿದ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಅವಕಾಶವಿದೆ.

ಯುಪಿಎ ಸರ್ಕಾರ ರಚಿಸಿದ 14ನೇ ಹಣಕಾಸು ಆಯೋಗ ಈಗ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಅದರ ಶಿಫಾರಸಿನ ಅನ್ವಯ, ಗ್ರಾಮ ಪಂಚಾಯಿತಿಗಳು ಮುಂದಿನ ವರ್ಷದಿಂದ ಜನಸಂಖ್ಯೆಗೆ ಅನುಗುಣವಾಗಿ ವಾರ್ಷಿಕ 488 ರೂಪಾಯಿ ತಲಾ ವರಮಾನ ಪಡೆಯಲಿವೆ. ಇದೇ ರೀತಿ ರಾಜ್ಯ ಹಣಕಾಸು ಆಯೋಗ ಸಹ ಹೆಚ್ಚುವರಿ ಹಣಕಾಸು ನೇರವಾಗಿ ಗ್ರಾಮ ಪಂಚಾಯಿತಿಗಳಿಗೆ ಸಿಗುವಂತೆ ಶಿಫಾರಸು ಮಾಡಬೇಕು. ಈ ಸಾಧನೆಗಾಗಿ ರಾಜ್ಯ ಸರ್ಕಾರ ಮೊದಲು ಹಣಕಾಸು ಆಯೋಗವನ್ನು ರಚಿಸಿ, ಕೇಂದ್ರದಲ್ಲಿರುವ ಪರಂಪರೆಯಂತೆ ಅದರ ಶಿಫಾರಸುಗಳನ್ನು ಪೂರ್ಣವಾಗಿ ಅನುಷ್ಠಾನಗೊಳಿಸಬೇಕು.

ಗ್ರಾಮೀಣ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಗಾಗಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ 21 ಕಾರ್ಯಕ್ರಮಗಳನ್ನು ರೂಪಿಸಿದೆ. ಇದರ ಜೊತೆಗೆ, ರಾಜ್ಯ ಸರ್ಕಾರ ಹಾಗೂ ಇತರ ಇಲಾಖೆಗಳು ಜಾರಿಗೊಳಿಸಿರುವ ಎಲ್ಲ ಕಾರ್ಯಕ್ರಮಗಳನ್ನೂ ಅನುಷ್ಠಾನಗೊಳಿಸಿದರೆ ಗ್ರಾಮಸ್ಥರ ಬಹುತೇಕ ಬೇಡಿಕೆಗಳನ್ನು ಈಡೇರಿಸಬಹುದಾಗಿದೆ. ಸರ್ಕಾರದ, ಸಂಘ ಸಂಸ್ಥೆಗಳ ಹಾಗೂ ಪಂಚಾಯತ್ ಕಾರ್ಯಕ್ರಮಗಳ ಫಲಾನುಭವಿಗಳ ಆಯ್ಕೆ ಗ್ರಾಮ ಸಭೆಯಲ್ಲಿಯೇ ಆಗಬೇಕು.

ಇದನ್ನು ಬದಿಗಿರಿಸಿ ಸ್ವಾರ್ಥ ಸಾಧನೆಗೆ ಗ್ರಾಮ ಸಭೆಯನ್ನು ವೇದಿಕೆಯಾಗಿ ಬಳಸಿಕೊಂಡರೆ ಗ್ರಾಮ ರಾಜ್ಯದ ಕನಸು ನನಸಾಗದು. ಗ್ರಾಮ ಒಂದು ಅವಿಭಕ್ತ ಕುಟುಂಬ. ಗ್ರಾಮ ಪಂಚಾಯಿತಿ ಸದಸ್ಯರು ಈ ಕುಟುಂಬದ ಹಿರಿಯರಿದ್ದಂತೆ. ಹಿರಿಯರು ತಮ್ಮ ಹಿತವನ್ನು ತ್ಯಾಗ ಮಾಡಿ ಮೊದಲು ಕುಟುಂಬದ ಇತರ ಸದಸ್ಯರ ಹಿತ ಸಾಧಿಸುತ್ತಾರೆ. ಕೊನೆಗೆ ತನ್ನ ಪರಿವಾರದ ಹಿತ ನೋಡುತ್ತಾರೆ. ಅದೇ ರೀತಿ ಗ್ರಾಮದ ಪ್ರಮುಖರಾದ ಪಂಚಾಯಿತಿ ಸದಸ್ಯರು ಸೌಲಭ್ಯವನ್ನು ಮೊದಲು ಇತರರಿಗೆ ವಿತರಿಸಿ, ಕೊನೆಗೆ ತಾವು ಅರ್ಹರಾಗಿದ್ದರೆ ಮಾತ್ರ ಪಡೆದುಕೊಳ್ಳುವ ಮನೋಭಾವ ರೂಢಿಸಿಕೊಳ್ಳಬೇಕು.

ಗ್ರಾಮ ಪಂಚಾಯಿತಿಗೆ ದೊರೆಯುವ ಹಣಕಾಸಿನ ಮಿತಿಯಲ್ಲಿ ಪಂಚಾಯಿತಿ ಸದಸ್ಯರು ಸ್ವತಂತ್ರ ರಾಷ್ಟ್ರದಂತೆ ಕೆಲಸ ಮಾಡುವ ಮನೋಭಾವ ಹೊಂದಿರಬೇಕು.

ಅಭಿವೃದ್ಧಿ ಕಾರ್ಯದ ಉಸ್ತುವಾರಿಯನ್ನು ಗ್ರಾಮ ಸಭೆಯಲ್ಲಿ ಆಯ್ಕೆಯಾದ 'ಪ್ರಾಮಾಣಿಕ ಸದಸ್ಯರ ಸಮಿತಿ'ಯೇ ನಿರ್ವಹಿಸುವಂತಾದರೆ, ಯೋಜನೆಗಳ ಅನುಷ್ಠಾನ ಪಾರದರ್ಶಕ, ದಕ್ಷತೆಯಿಂದ ಕೂಡಿರುತ್ತದೆ. ಪ್ರಜಾಸತ್ತೆಯಲ್ಲಿ ಪ್ರಜೆಗಳೇ ಪ್ರಭುಗಳು. ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯಿತಿ, ಸರ್ಕಾರಗಳು, ವಿವಿಧ ಸಂಘ ಸಂಸ್ಥೆಗಳು ಈ ಪ್ರಭುವಿನ ಸೇವೆಗಾಗಿ, ಅನುಕೂಲಕ್ಕಾಗಿಯೇ ಸ್ಥಾಪನೆಗೊಂಡಿವೆ ಎಂಬುದನ್ನು ಜನಪ್ರತಿನಿಧಿಗಳು ಅರಿಯಬೇಕು.

ವಿಷಾದವೆಂದರೆ, ನಮ್ಮ ಪ್ರಭು ತನಗಿರುವ ಸೌಲಭ್ಯ ಹಾಗೂ ಅವಕಾಶವನ್ನು ಅರಿತಿಲ್ಲ. ಹೀಗಾಗಿ ವ್ಯವಸ್ಥೆಯೇ ಪ್ರಭುಗಳ ಮೇಲೆ ಸವಾರಿ ಮಾಡುತ್ತಿದೆ. ಅದಕ್ಕೆ ಕೊನೆ ಹಾಡಲು ರಮೇಶ್ ಕುಮಾರ್ ಸಮಿತಿಯ ಶಿಫಾರಸುಗಳು ಪೂರಕವಾಗಿವೆ. ಸರ್ಕಾರ ಅವುಗಳನ್ನು ಜಾರಿಗೆ ತಂದು ನಮ್ಮ ಹಿರಿಯರ ಕನಸಿನ ಗ್ರಾಮ ರಾಜ್ಯಕ್ಕೆ, ಆ ಮೂಲಕ ರಾಮರಾಜ್ಯ ಸ್ಥಾಪನೆಗೆ ನಾಂದಿ ಹಾಡಬೇಕು.
(ಲೇಖಕ ಸಹಕಾರಿ ಧುರೀಣ ಹಾಗೂ ಮಾಜಿ ಶಾಸಕ)

'ಗುಮ್ಮಗೋಳ ಮಾದರಿ' ಆದದ್ದು ಹೇಗೆ?


ಮಹಾದೇವಿ ವಾಲಿ

ದೇಶದ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ 'ಗುಮ್ಮಗೋಳ ಮಾದರಿ'ಯನ್ನು ಹುಟ್ಟುಹಾಕಿದ ಶ್ರೇಯ ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕಿನ ಗುಮ್ಮಗೋಳ ಗ್ರಾಮ ಪಂಚಾಯಿತಿಗೆ ಸಲ್ಲುತ್ತದೆ. ಮೂಲ ಸೌಕರ್ಯಕ್ಕೆ ಒತ್ತು, ಸ್ಥಳೀಯವಾಗಿಯೇ ಸಂಪನ್ಮೂಲ ಕ್ರೋಡೀಕರಣ, ಸರ್ಕಾರದ ಯೋಜನೆಗಳ ಅನುಷ್ಠಾನ ಮತ್ತು ನಿರ್ವಹಣೆಗೆ ಪಾರದರ್ಶಕ ಕ್ರಮ ಕೈಗೊಂಡಿದ್ದರಿಂದ ಇದು ಸಾಧ್ಯವಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ನಿರ್ಮಲ ಗ್ರಾಮ ಪುರಸ್ಕಾರ, ರಾಷ್ಟ್ರೀಯ ಗೌರವ ಗ್ರಾಮ ಸಭೆ, ಪಂಚಾಯತ್ ಉತ್ತರದಾಯಿತ್ವ ಸಬಲೀಕರಣ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದೆ.

'ನಮ್ಮನಿ ರೊಕ್ಕದ ಲೆಕ್ಕ ಇಡ್ತೀವಲ್ರಿ ಹಂಗೇ ಪಂಚಾಯ್ತಿದೂ ಇಟ್ಟೇವ್ರಿ. ಅದಾ ನಮ್ ಯಶಸ್ಸಿನ ಗುಟ್ಟು' ಎನ್ನುತ್ತಾರೆ ಗುಮ್ಮಗೋಳ ಪಂಚಾಯ್ತಿ ಅಧ್ಯಕ್ಷೆ ಮಹಾದೇವಿ ವಾಲಿ. ಸರ್ಕಾರದ ಅನುದಾನದತ್ತ ನೋಡುವ ಪರಿಪಾಠ ಬಿಟ್ಟು, ಜನರ ಮನವೊಲಿಸಿ ಶೇ 100 ತೆರಿಗೆ ಸಂಗ್ರಹ ಮಾಡಿ, ಅದನ್ನೇ ಮೂಲ ಸೌಕರ್ಯಕ್ಕೆ ಬಳಸಿಕೊಂಡೆವು ಎನ್ನುತ್ತಾರೆ ಅವರು.

* ಜನಜಾಗೃತಿ ಮೂಡಿಸಿದರೆ ಫಲಾನುಭವಿಗಳ ಆಯ್ಕೆಯಲ್ಲಿ ಹಸ್ತಕ್ಷೇಪ, ಭ್ರಷ್ಟಾಚಾರ ತಗ್ಗುತ್ತದೆ. ನಾವು ಮಾಡಿದ್ದು ಅದನ್ನೇ. ಹೀಗಾಗಿ

ನಮ್ಮ ಗ್ರಾಮ ಸಭೆಗಳಿಗೆ, ಮಹಿಳಾ ಗ್ರಾಮ ಸಭೆಗಳಿಗೆ ನೂರಾರು ಜನ ಬರುತ್ತಾರೆ.

-ದ್ರಾಕ್ಷಾಯಣಮ್ಮ, ಅಧ್ಯಕ್ಷೆ, ಶೆಟ್ಟಿಕೆರೆ ಗ್ರಾ.ಪಂ, ತುಮಕೂರು ಜಿಲ್ಲೆ



---